ಎಂ.ವಿ.ಸಿ - 1071/2023
ಪಿ.ಡಬ್ಲ್ಯು - 02

**ದಿನಾಂಕ 03-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ಶ್ರೀ ಡಿಬಿಎಸ್ ವಕೀಲರಿಂದಃ**

ಅರ್ಜಿದಾರರು ನನ್ನ ಸ್ನೇಹಿತ ಅಲ್ಲ . ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ಬರೆಯಿಸಿರುತ್ತೇನೆ.ನಾನು ಹೇಳಿದ ರೀತಿ ನಮ್ಮ ವಕೀಲರು ತಯಾರಿಸಿರುತಾರೆ. ನ್ಯಾಯಲಯದಿಂದ ನನಗೆ ಸಮನ್ಸ್ ಬಂದಿತ್ತು. ವಕೀಲರಾದ ಮಧುಕೇಶ್ ರೈ ರವರ ಕಚೇರಿಗೆ ಹೋಗಲು ಏನು ಕಾರಣ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರು ಮೊದಲಿನಿಂದಲೂ ಗೊತ್ತಿದ್ದರು ಎಂದು ತಿಳಿಸಿರುತ್ತಾರೆ. ಅಪಘಾತ ನೋಡಿದ್ದೇನೆ ಇದೇ ಪ್ರಥಮ ಬಾರಿಗೆ ಹೇಳುತಿದ್ದೇನೆ. ನಾನು ಪೈಟಿಂಗ್ ವೃತ್ತಿ ಮಾಡುತ್ತೇನೆ. ಅಪಘಾತದ ದಿನ ಪೈಟಿಂಗ್ ಕೆಲಸ ಇರಲಿಲ್ಲ . ಅಪಘಾತದ ದಿನ ಮಲ್ಪೆ ಯಿಂದ ಎರ್ಮಾಳ್ ಕಡೆಗೆ ಹೋಗುತಿದ್ದೆ . ಅಪಘಾತ ಸ್ಥಳವನ್ನು ನಾನು ನೋಡಿರುತ್ತೇನೆ. ಅಪಘಾತ ಸ್ಥಳ ದಲ್ಲಿ ಯಾರು ಇರಲಿಲ್ಲ ನಾನೇ ಹೋಗಿರುತ್ತೇನೆ. ಅಪಘಾತ ಮದ್ಯಾಹ್ನ 3.30 ರ ಸಮಯದಲ್ಲಿ ಆಗಿರುತ್ತದೆ. ರಸ್ತೆ ಬ್ಲಾಕ್ ಆಗಿರಲಿಲ್ಲ. ನನ್ನ ವಾಹನದ ಮುಂದೆ ಆಟೋ ರಿಕ್ಷಾ ಇತ್ತು. ಅದೇ ಅಪಘಾತವಾಗಿರುತ್ತದೆ. ನಾನು ಆಟೋರಿಕ್ಷಾ ವನ್ನು 10 ಮೀಟರ್ ಅಂತರದಲ್ಲಿ ಫಾಲೋ ಮಾಡುತಿದ್ದೆ. ನಾನು 20 ರಿಂದ 25 ಮೀಟರ್ ವೇಗದಲ್ಲಿ ಹೋಗುತಿದ್ದೆ. ಆಟೋ ರಿಕ್ಷಾ ಮುಂದೆ ಹೋಗುತಿದ್ದ Ace tempo ಗೆ ಡಿಕ್ಕಿ ಆಯಿತು ಎಂದರೆ ಸರಿಯಲ್ಲ . ಆಟೋ ರಿಕ್ಷಾ ಪಲ್ಟಿ ಆಯಿತು. ಆಟೋ ರಿಕ್ಷಾ ಪಲ್ಟಿ ಆಗಿದ್ದರಿಂದ ಅದರಲ್ಲಿ ಇದ್ದ ಪ್ಯಾಸೆಂಜರ್ ಗಳು ಬಿದ್ದು ಗಾಯವಾಗಿರುತ್ತದೆ. ಗಾಯಾಳುಗಳನ್ನು ಆಸ್ಪತ್ರೆಗೆ ನಾನು ಕರೆದುಕೊಂಡು ಹೋಗಿಲ್ಲ . ಆಟೋ ಚಾಲಕ ಯಾರು ಎಂದು ನನಗೆ ಗೊತ್ತಿಲ್ಲ . ಆಟೋ ಚಾಲಕನಿಗೂ ಕೂಡ ಸ್ವಲ್ಪ ಪೆಟ್ಟು ಆಗಿತ್ತು.

ಎಂ.ವಿ.ಸಿ - 1071/2023
ಪಿ.ಡಬ್ಲ್ಯು - 02

ಗಾಯಳುಗಳ ಮನೆಯವರಿಗೆ ತಿಳಿಸುವ ಪ್ರಯತ್ನ ನಾನು ಮಾಡಿಲ್ಲ . ನಾನು ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ . ಅಪಘಾತದ ವಿಷಯವನ್ನು ನನ್ನ ಪ್ರಮಾಣಪತ್ರದಮೂಲಕ ಇದೇ ಮೊದಲ ಬಾರಿಗೆ ಹೇಳುತಿದ್ದೇನೆ ಎಂದರೆ ಸರಿ . ನಾನು ಪ್ರಮಾಣ ಪತ್ರದಲ್ಲಿ ಹೇಳುವ ರೀತಿ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.